ಬೇಕಾಗುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆಯೂ ನೋಡಿಕೊಳ್ಳುವುದಾಗಿ ತಮ್ಮಲ್ಲಿ ಕೇಳಿ ಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

(ಗೊಂದಲ)

ಶ್ರೀ ಜೆ. ನಾರಾಯಣಕುಮಾರ್.—ನಾನು ದಯವಿಟ್ಟು . ಹೇಳುತ್ತೇನೆ, ಯಾರೂ ಮಾಡದೆ ಇರತಕ್ಕಂಥ ಅಪರಾಧವನ್ನು ನಾನು ಮಾಡಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರು ಕ್ಷಮಾಪಣೆ ಕೇಳಿಕೊಳ್ಳಬೇಕು ; ಇಲ್ಲವಾದರೆ ಸಭೆಯ ನಿಯಮಾವಳಿ ಪ್ರಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ನಾನು ಮಾಡಿದ ಕೃತ್ಯಕ್ಕೆ ಸಭೆಯನ್ನು ಕ್ಷಮಾಪಣೆ ಕೇಳಿ ಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರ್.—ಸ್ವಾಮಿ, ಇದು ಬಹಳ ಮಹತ್ವದ ಪ್ರಶ್ನೆಯಾದ ಕಾರಣ ಮುಖ್ಯಮಂತ್ರಿಗಳು ಬರುವವರೆಗೆ ಇದನ್ನು ತಡೆಹಿಡಿಯುವುದು ಒಳ್ಳೆಯದು. ಇದರಿಂದ ಈ ಸದನಕ್ಕೂ ಒಳ್ಳೆಯದಾಗುತ್ತದೆ, ನಮಗೂ ಒಳ್ಳೆಯದಾಗುತ್ತದೆ ಮತ್ತು ಇತರರಿಗೂ ಒಳ್ಳೆಯದಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಡಬೇಕೆಂದು ಈ ಸಭೆ ಅಭಿಪ್ರಾಯ ಪಡುವುದಾದರೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ —ನಮಗೆ ಈ ಪ್ರಶ್ನೆಗೆ ಉತ್ತರ ಬೇಕಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಿದ್ದರೆ ಕೊಡಲಿ.

ಉಪಾಧ್ಯಕ್ಷರು.—ಈಗ ಶ್ರೀ ಬಾಪೂಗೌಡರು ೨ಳನೇ ಸಂಖ್ಯೆಯ ಪ್ರಶ್ನೆ ಕೇಳಬಹುದು.

ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

ಪ್ರಶ್ನೆ ನಂ. ೨೪

ಶ್ರೀ ಬಾಪೂಗೌಡ ದಾರನಾ ಪೂರ (ಶಹಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಿಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಸರ್ಕಾರವು ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಯನ್ನು ಸ್ಥಾಪಿಸಿದೆಯೇ ?

ಆ) ಹಾಗಾದರೆ, ಯಾವಾಗ;

ಇ) ವಿಭಾಗಾಧಿಕಾರಿ ಮತ್ತು ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಈ ದೇಶದಲ್ಲಿರುವ ಇಂತಹ ಮಂಡಳಿಗಳಿಗೆ ಭೇಟಿಕೊಟ್ಟು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ವರದಿ ಮಾಡಲು ಸಮಿತಿಯನ್ನು ನೇಮಿಸಿರುವುದರ ವಾಸ್ತವವಲ್ಲವೆ ?

ಈ) ಆ ಸಮಿತಿಯು ವರದಿಯನ್ನು ಮಾಡಿದೆಯೇ ? ಹಾಗಾದರೆ ಅದರ ಶಿಫಾರಸ್ಸುಗಳು ಮತ್ತು ಅವನ್ನು ಜಾರಿಗೊಳಿಸಲು ಸರಕಾರವು ಏನು ಕ್ರಮವನ್ನು ತೆಗೆದುಕೊಂಡಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಮುಖ್ಯಮಂತ್ರಿಗಳು

ಅ) ಇಲ್ಲ.

ಆ) ಪ್ರಶ್ನೆಯು 'ಆ' ಬಾಗಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಯಾವ ಸಮಿತಿಯೂ ಇಲ್ಲ. ಆದು ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಸಮಿತಿಯ ಉಪಸಮಿತಿಯನ್ನು ಹಿಂದಿನ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು.

ಈ) ಹೌದು. ಸಮಿತಿಯು ಶಿಫಾರಸ್ಸು ಈ ಕೆಳಕಂಡಂತಿವೆ ;

೧) ಆ ಪ್ರದೇಶದ ಚುನಾಯಿತ ಸದಸ್ಯರನ್ನೊಳಗೊಂಡ ಶಾಸನ ಬದ್ಧ ಗುಲ್ಬರ್ಗ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ರಚಿಸುವುದು ;

೨) ಅಭಿವೃದ್ಧಿ ಕಾರ್ಯಕ್ರಮಗಳನ್ನು ಉಸ್ತುವಾರಿ ಮಾಡಲು ಮಂಡಳಿಯಂ ಕಾರ್ಯನಿರ್ವಾಹಕ ಸಮಿತಿಯನ್ನು ಸಚಿಸುವುದು.

೩) ಸಾಮಾನ್ಯ ಯೋಜನೆ ಕಾರ್ಯಕ್ರಮಗಳ ಜೊತೆಗೆ ಹತ್ತು ವರ್ಷಗಳಿಗೆ ಹರಡಿದ ೩೫೦ ಕೋಟಿ ರೂ.ಗಳ ಯೋಜನೆಯನ್ನು ಕಾರ್ಯಗತ ಮಾಡುವುದು ;

೪) ಸಾಂಸ್ಥಿಕ ಹಣವನ್ನು ಆಕರ್ಶಿಸಬಹುದಾದ ಶಾಶ್ವತವಾದ ವಾಣಿಜ್ಯ ಯೋಜನೆಗಳನ್ನು ಕಾರ್ಯಗತಗೊಳಿಸಲು, ಗುಲ್ಬರ್ಗ ಪ್ರದೇಶ ಅಭಿವೃದ್ಧಿ ಸಂಸ್ಥೆಯನ್ನು ರಚಿಸುವುದು

ಅಂಶ ಮೂರರಲ್ಲಿ ಉಲ್ಲೇಖಿಸಿರುವ ೩೫೦ ಕೋಟಿ ರೂ.ಗಳ ಯೋಜನೆಯನ್ನು ತತ್ವಶಃ ಸರ್ಕಾರ ಒಪ್ಪಿದೆ. ಇದನ್ನು ೧೦ ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಜಾರಿಗೆ ತರಲಾಗುವುದು. ೧೯೮೨–೮೩ರಲ್ಲಿ ಈ ಯೋಜನೆಗಾಗಿ ೧೦ ಕೋಟಿ ರೂ.ಗಳನ್ನು ವಿಾಸಲಾಗಿಡಲಾಗಿದ್ದು ಈಗಾಗಲೇ ೭ ೪೮ ಕೋಟಿ ರೂ.ಗಳಿಗೆ ಮಂಜೂರಾತಿ ನೀಡಲಾಗಿದೆ. ಉಳಿದ ಹಣದ ಮಂಜೂರಾತಿಯನ್ನು ಮಾರ್ಚಿ ೩೧ರ ಒಳಗೆ ಕೊಡಲಾಗುವುದು.

ಅಂಶ ೧, ೨ ಮತ್ತು ೪ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಾಪೂಗೌಡ ದರ್ಶನಾಪೂರ್.—ಇಲ್ಲಿ ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಏಂದು ಹೇಳಿದ್ದೀರಿ ಆದರೆ ಹೈದರಾಬಾದ್.–ಕರ್ನಾಟಕ ಅಭಿವೃದ್ಧಿ ಸಮಿತಿಯ ಉಪಸಮಿತಿಯನ್ನು ಹಿಂದಿನ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು ಎಂದು ಹೇಳಿದ್ದೀರಿ. ಈ ಉಪಸಮಿತಿಯವರು ಮಾಡಿರುವಂತಹ ಶಿಫಾರಸ್‌ಗಳು ಯಾವುವು ? ಮತ್ತು ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ತೀರ್ಮಾನವೇನು ?

ಶ್ರೀ ಎಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳ ಪರವಾಗಿ)—ಈ ಉಪಸಮಿತಿಯವರು ಮಾಡಿರುವಂತಹ ೪ ಶಿಫಾರಸ್‌ಗಳು ಯಾವುವು ಎಂಬುದನ್ನು ಉತ್ತರದಲ್ಲಿ ಹೇಳಲಾಗಿದೆ. ಗುಲ್ಬರ್ಗದಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ಶಿಫಾರಸ್‌ಗಳ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುವ ಕಾಲದಲ್ಲಿ ಏನು ಮಾಡಿದ್ದಾರೆಂಬುದನ್ನು ಹೇಳುತ್ತೇನೆ.—

> "The Cabinet having considered the report of the Hyderabad-Karnataka Development Committee on "Plan for Backward Area Development–Gulbarga Division" has decided to form a Board for the co-ordination of the develop mental activities of Gulbarga division. The board will be Called Gulbarga Area Development Board" The Board will be an effective agency to formulate schemes, to monitor the plan schemes and generally be a watch-dog for safeguarding the interest of the Division and to ensure that lapsing of funds by various Government Departments is avoided."

ಸ್ವಾಮಿ, ಒಂದು ಬೋರ್ಡನ್ನು ಈ ಬಗ್ಗೆ ಸ್ಥಾಪಿಸಲು ಕಾಲ ಪಕ್ವವಾಗಿಲ್ಲವೆಂದು ಈ ಹಿಂದಿನ ಮುಖ್ಯ ಮಂತ್ರಿಗಳು ತಮ್ಮ ಅಂತಿಮ ನಿರ್ಣಯವನ್ನು ಮುಂದೂಡಿದ್ದರು.

ಶ್ರೀ ಬಾಪುಗೌಡ ದರ್ಶನಾಪುರ.—ಈ ಬಗ್ಗೆ ರಚಿಸಲಾಗಿದ್ದ ಉಪಸಮಿತಿಯವರು ಇಡೀ ದೇಶದಲ್ಲಿ ಸಂಚಾರ ಮಾಡಿ ಅದರ ಒಂದು ಆಧಾರದ ಮೇಲೆ ಸರ್ಕಾರಕ್ಕೆ ಕೆಲವೊಂದು ಶಿಫಾರಸ್‌ಗಳನ್ನು ಮಾಡಿದ್ದಾರೆ. ಈ ಶಿಫಾರಸ್‌ಗಳ ಪೈಕಿ ಆ ಪ್ರದೇಶದ ಜುನಾಯಿತ ಸದಸ್ಯರನ್ನೊಳಗೊಂಡ ಶಾಸನಬದ್ಧ ಗುಲ್ಬರ್ಗ ಪ್ರದೇಶ ಅಭಿವೃದ್ಧಿ ಮಂಡಲಿಯನ್ನು ರಚಿಸುವುದು ಸಹ ಸೇರಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಚ್.ಡಿ. ದೇವೇಗೌಡ. —ಮಂಡಳಿ ಇನ್ನೂ ರಚನೆಯಾಗಿಲ್ಲ. ಮಾನ್ಯ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿದ್ದು, ಆ ಸಮಿತಿಯಲ್ಲಿ ಇಬ್ಬರು ಲೋಕಸಭಾಸದಸ್ಯರು, ಏಳು ಜನ ವಿಧಾನಸಭಾ ಸದಸ್ಯರು ಇದ್ದು, ಅವರು ಇಡೀ ರಾಷ್ಟ್ರದ ಪ್ರಮುಖ ನಗರಗಳಿಗೆ ಭೇಟಿ ಕೊಟ್ಟು ವರದಿಯನ್ನು ಕೊಟ್ಟಿದ್ದಾರೆ, ಅವರು ಎಲ್ಲೆಲ್ಲಿ ಭೇಟಿ ಕೊಟ್ಟಿದ್ದಾರೆಂಬುದನ್ನು ಬೇಕಾದರೆ ಹೇಳುತ್ತೇನೆ.ಅವರು ಭೇಟಿಕೊಟ್ಟು ವಿಷಯಗಳನ್ನು ಅವಲೋಕನೆ ಮಾಡಿಕೊಂಡು ಕೊಟ್ಟಿರತಕ್ಕ ವರದಿಯನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಅವರು ಕೊಟ್ಟಿರತಕ್ಕ ವರದಿಯ ಪ್ರಮುಖ ಶಿಫಾರಸ್ಸುಗಳು ಏನೆಂಬುದನ್ನು ತಾವು ಇಲ್ಲಿ ನೋಡಬಹುದು.

ಶ್ರೀ ಧರ್ಮಸಿಂಗ್.—ಮಾನ್ಯ ಸಚಿವರು ಉತ್ತರ ಕೊಡುವಾಗ 'ಹೈದರಾಬಾದ್ ಕರ್ನಾಟಕ ಸ್ಪೆಷಲ್ ಟೂರಿಸ್ಟ್ ಬೋರ್ಡನ್ನು ರಚನೆ ಮಾಡಿಲ್ಲ ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ನಾನು ಉಪಸಮಿತಿಯ ಅಧ್ಯಕ್ಷನಾಗಿ ವರದಿ ಸಲ್ಲಿಸಿದ ಮೇಲೆ, ಗುಲ್ಬರ್ಗಾದಲ್ಲಿ ನಡೆದ ಸಚಿವಸಂಪುಟ ಸಭೆಯಲ್ಲಿ 'ಹೈದರಾಬಾದ್ ಕರ್ನಾಟಕ ಸ್ಪೆಷಲ್ ಟೂರಿಸ್ಟ್ ಬೋರ್ಡ್' ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸಚಿವಸಂಪುಟ ನಿರ್ಣಯ ಮಾಡಿದೆ. ಇದುವರೆಗೆ ಇದರ ಬಗ್ಗೆ ಏತಕ್ಕೆ ತಾವು ಕ್ರಮ ತೆಗೆದುಕೊಳ್ಳಲಿಲ್ಲ ? ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಸಮಿತಿ ಮಾಡಿರುವ ಶಿಫಾರಸ್ಸಿನ ಮೇರೆಗೆ ೧೦ ವರ್ಷಗಳ ಅವಧಿಯಲ್ಲಿ ೩೫೫ ಕೋಟಿರೂಪಾಯಿಗಳನ್ನು ಖರ್ಚುಮಾಡಬೇಕೆಂದು ನಿಗದಿ ಮಾಡಲಾಗಿದೆ. ಕಳೆದ ವರ್ಷ ಏಪ್ರಿಲ್ ತಿಂಗಳಿನಿಂದಲೇ ಮಂಜೂರಾತಿ ಕೊಡಲಾಗಿದೆ. ತಾವು ಹೇಳುತ್ತೀರಿ ಇಲ್ಲಿಯವರೆಗೆ ೭ ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು. ಮಾನ್ಯ ಬಾಪುಗೌಡರವರು ಕೇಳತಕ್ಕ ಪ್ರಶ್ನೆ ಇಷ್ಟೆ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್ ಕೆಲಸ ಮಾಡಬೇಕೆಂದು ಹಿಂದಿನ ಸರ್ಕಾರ ತೀರ್ಮಾನ ಕೈಗೊಂಡಿದೆ ಇನ್ನುಮುಂದೆ ಹೊಸ ಸರ್ಕಾರ ಮಾಡತಕ್ಕ ಕಾರ್ಯಕ್ರಮವೇನು ? ಏನೂ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತಿದ್ದಾರೆ. 'ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಹಣ ಖರ್ಚು ಮಾಡಿ ಪ್ರಗತಿಪರ ಕೆಲಸಕಾರ್ಯಗಳು ಆಗಬೇಕೆಂದು ಹಿಂದಿನ ಸರ್ಕಾರ ತೀರ್ಮಾನ ಕೈಗೊಂಡಿತ್ತು. ಇಂದಿನ ಸರ್ಕಾರ ಏನು ಮಾಡುತ್ತದೆಂಬುದನ್ನು ಸ್ಪಷ್ಟಪಡಿಸಬೇಕು. ತಮ್ಮ ೨ ತಿಂಗಳ ಅವಧಿಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಧರ್ಮಸಿಂಗ್‌ರವರು ಏನೊಂದು ಪುಸ್ತಕವನ್ನು ಎತ್ತಿ, ತೋರಿಸಿದ್ದಾರೆ ಅದು 'ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ' ಎನ್ನತಕ್ಕ ಒಂದು ಸಂಸ್ಥೆಯನ್ನು ಆಸ್ತಿತ್ವಕ್ಕೆ ತರಬೇಕು ಎನ್ನುವುದರ ಬಗ್ಗೆ ಅವರು ಕೊಟ್ಟಿರತಕ್ಕ ವರದಿ. ಹಿಂದಿನ ಸರ್ಕಾರ ಒಂದು ಸಮಿತಿಯನ್ನು ಮಾಡಿತ್ತು, ಅದರ ಬಗ್ಗೆ ಈಗ ಹೇಳಲೇಬೇಕಾಗುತ್ತದೆ. ನೀವು ಕೊಟ್ಟಿರತಕ್ಕ ವರದಿಗೆ ಒಂದು ಹೆಸರನ್ನಿಟ್ಟು ವರದಿಯನ್ನು ಕೊಟ್ಟಿದ್ದೀರಿ. ವರದಿಯಲ್ಲಿ ವಿಷಯಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ, ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಹಿಂದುಳಿದ ಪ್ರದೇಶವನ್ನು ಮುಂದುವರಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂಬುದನ್ನು ತಾವು ವರದಿಯಲ್ಲಿ ಹೇಳಿದ್ದೀರಿ. ಆ ವರದಿಯನ್ನು ನಾನೂ ಓದಿದ್ದೇನೆ. ಈ ಸರ್ಕಾರಕ್ಕೆ ವರದಿಯ ಬಗ್ಗೆ ಕಾಳಜಿ ಇದೆಯೇ, ಆ ವರದಿಯ ಆಧಾರದ ಮೇಲೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದುವರಿಸುತ್ತೀರಾ ಎಂದು ಕೇಳಿದ್ದೀರಿ, ಈಗ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳತಕ್ಕ ಕಾಲದಲ್ಲಿ ನಾವು ಯಾವುದನ್ನೂ ಮುಚ್ಚಿಡಬೇಕಾಗಿಲ್ಲ. ಕಡತದಲ್ಲಿರತಕ್ಕ ಎಲ್ಲಾ ವಿಷಯಂಗಳನ್ನು ಸಭೆಯ ಮುಂದೆ

ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ತಾವು ಏನು ತೀರ್ಮಾನ ಮಾಡಿದ್ದೀರಿ ಅಂದರೆ ಈ ವರ್ಷ ೧೦ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಮಾಡಿದ್ದೀರಿ. ಬೇರೆ ಬೇರೆ ಜಿಲ್ಲೆಗಳಿಗೆ ಕೊಟ್ಟಂತಹ ಹಣದಲ್ಲಿ ಈ ಬೋರ್ಡಿಗೆ ೬ ಕೋಟಿ ರೂಪಾಯಿಗಳನ್ನು ಡೈವರ್ಟ್ ಮಾಡುವುದು ಎಂದು ಮಾಡಿದ್ದೀರಿ. ಉಳಿದ ನಾಲ್ಕು ಕೋಟಿ ರೂಪಾಯಿ ಹಣವನ್ನು ಮಾಡತಕ್ಕ ವೆಚ್ಚದಲ್ಲಿ ಉಳಿತಾಯಮಾಡಿ ಈ ಕಡೆಗೆ ವರ್ಗಾಯಿಸಬೇಕೆಂದು ಹಿಂದಿನ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಈ ನಿರ್ಣಯ ತೆಗೆದುಕೊಂಡ ಮೇಲೆ ಸಧ್ಯಕ್ಕೆ ೭.೪೮ ಲಕ್ಷ ರೂಪಾಯಿ ಬಿಡುಗಡೆ ಮಾಡಬೇಕೆಂಮು ನಿರ್ಣಯ ತೆಗೆದು ಕೊಂಡಿದ್ದೇವೆ.

ಶ್ರೀ ಎಚ್.ಡಿ. ಚೌಡಯ್ಯ.—೬ ಕೋಟಿ ರೂಪಾಯಿ ಯಾವ್ಯಾವ ರೀತಿ ಸಂಗ್ರಹ ಮಾಡುವುದು ಎಂಬುದರ ಬಗ್ಗೆ ವಿವರ ಕೊಡುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ಹೇಳುತ್ತೇನೆ.

ಲೋಕೋಪಯೋಗಿ ಇಲಾಖೆಯಿಂದ	೧.೪೮	ಲಕ್ಷ ಡೈವರ್ಟ್ ಮಾಡಬೇಕೆಂದು
ಆರೋಗ್ಯ ಇಲಾಖೆಯಿಂದ	೪೧	,,
ವಿದ್ಯಾಭ್ಯಾಸ ಇಲಾಖೆಯಿಂದ	೨೬	,,
ಸಣ್ಣ ನೀರಾವರಿ ಇಲಾಖೆಯಿಂದ	೬೦	,,
ಪಶುವೈದ್ಯ ಮತ್ತು ಪಶುಸಂಗೋಪನ ಇಲಾಖೆಯಿಂದ	೧೬	,,
ರೇಷ್ಮೆ ಇಲಾಖೆಯಿಂದ	೦೬	,,
ಆರ್ಥಿಕ ಇಲಾಖೆಯಿಂದ	೪೦	,,
ಗ್ರಾಮಾಂತರ ಪ್ರದೇಶ ಕುಡಿಯುವ ಯೋಜನೆ ಪತಿಯಿಂದ	೬೫	,,
ಗೃಹನಿರ್ಮಾಣ ಇಲಾಖೆಯಿಂದ	೦೩	,,
ಕೊಳಚೆಪ್ರದೇಶ ನಿರ್ಮೂಲನ ಮತಿಯಿಂದ	೨೬	,,
ಸಾಯಿಲ್ ಕನ್ಸರ್ವೇಷನ್ ಇಲಾಖೆಯಿಂದ	೨೦	,,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ	೧೪	,,
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ	೧೫	,,
ವ್ಯವಸಾಯ ಇಲಾಖೆಯಿಂದ	೧೧	,,
ತೋಟಗಾರಿಕೆ ಇಲಾಖೆಯಿಂದ	೧೧	,,
ಮೀನುಗಾರಿಕೆ ಇಲಾಖೆಯಿಂದ	೦೬	,,

ಹೀಗೆ ಒಟ್ಟು ೬೦೦ ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಇಲಾಖೆಯಿಂದ ವೆಚ್ಚಕ್ಕೆ ಇಟ್ಟಿರತಕ್ಕ ಹಣದಿಂದ ಡೈವರ್ಟ್‌ಮಾಡಬೇಕೆಂದು ಹಿಂದಿನ ಸರ್ಕಾರ ನಿರ್ಣಯ ಮಾಡಿದ್ದು, ಅಂದರೆ ತಾವು ಕೊಟ್ಟಿರತಕ್ಕ ವರದಿಯನ್ನು ಕೈಬಿಡಬೇಕೆಂಬ ಪ್ರಶ್ನೆ ಸರ್ಕಾರಕ್ಕೆ ಇಲ್ಲ. ಆವೊತ್ತಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಕೆಲವು ಮಾರ್ಪಾಟುಗಳನ್ನು ಮಾಡಬೆಕಾಗುತ್ತದೆ. ಸಂಬಂಧಪಟ್ಟ ಹಾಗೆ ಪವರ್ಸ್‌ನ್ನು ಡಿಸೆಂಟ್ರಲೈಸ್ ಮಾಡಬೇಕೆಂದಿದ್ದೇವೆ. ಜಿಲ್ಲಾ ಪರಿಷತ್‌ಗಳನ್ನು ಆಸ್ಥಿತ್ವಕ್ಕೆ ತರುವ ಯೋಜನೆ ಸರ್ಕಾರಕ್ಕೆ ಇದೆ. ಜಿಲ್ಲಾ ಪರಿಷತ್ತಿನಲ್ಲಿ ಆಯಾ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ಸರ್ಕಾರ ಈ ಒಂದು ಧೋರಣೆಯಿಂದ ಇರತಕ್ಕ ಆಕ್ಟ್‌ಗೆ ತಿದ್ದುಪಡಿ ಮಾಡುವುದಕ್ಕೆ ಮಂಡಿಂದೆ ಹೋಗಿರತಕ್ಕ ಸನ್ನಿವೇಶದಲ್ಲಿ ಆ ಒಂದು

ಸಂಸ್ಥೆಗೆ ಹೆಚ್ಚು ಅಧಿಕಾರ ಕೊಡಬೇಕೆಂಬ ಉದ್ದೇಶದಿಂದ ಮಾಡುತ್ತಿದ್ದೇವೆ. ಆಯಾಯ ಜಿಲ್ಲೆಯ ಹಿಂದುಳಿದ ಪ್ರದೇಶಗಳ ತೀವ್ರತೆಯ ಪರಿಸ್ಥಿತಿಗನುಗುಣವಾಗಿ ಸಾಕಷ್ಟು ಹಣವನ್ನು ಒದಗಿಸಬೇಕೆಂದಿದ್ದೇವೆ. ಆ ಒಂದು ದೃಷ್ಟಿಕೋನವನ್ನು ಸರ್ಕಾರ ಇಟ್ಟುಕೊಂಡಿರುವುದರಿಂದ ಅದಕ್ಕೆ ಪ್ರತ್ಯೇಕವಾದ ಬೋರ್ಡ್ ಮಾಡುವುದು ಅವಶ್ಯಕತೆ ಇಲ್ಲವೆಂದು ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಮಾನ್ಯ ಮಂತ್ರಿಗಳು ಹೇಳುವ ರೀತಿ ನೋಡಿದರೆ ಸ್ಯಾಟ್ಸ್ ಚುಟರಿ ಮಂಡಳಿಯನ್ನು ರಚನೆ ಮಾಡುವ ಹಾಗೆ ಕಾಣುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ನಿಮ್ಮ ಅನಿಸಿಕೆ ಪ್ರಕಾರ, ನೀವು ಕೊಟ್ಟಿರತಕ್ಕ ಶಿಫಾರಸ್ಸು ಸರ್ವಶಾಶ್ವತವಲ್ಲ. ಸಮಿತಿ ಕೊಟ್ಟಿರತಕ್ಕ ಆಧಾರದ ಮೇಲೆ ಹೇಳುವುದಾದರೆ, that should work under the Government. ತಾವು ಕೊಟ್ಟಿರುವ ವರದಿಯಂತೆ ಸರ್ಕಾರ ಕೆಲಸಮಾಡುವುದಕ್ಕೆ ಆಗುವುದಿಲ್ಲ. It should function like a watch dog ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ, ಎಷ್ಟು ಖರ್ಚುಮಾಡಿದ್ದಾರೆ ? ಹಣ ಉಳಿತಾಯವಾಗುವುದಕ್ಕೆ ಕಾರಣವೇನು ? ಅವುಗಳನ್ನು ಪರಿಶೀಲನೆ ಮಾಡತಕ್ಕಂತಹ ಅವಕಾಶವಿರಬೇಕು. ಜಿಲ್ಲಾಪರಿಷತ್ ಇರಬೇಕೆಂದು ತೀರ್ಮಾನ ಮಾಡಿರತಕ್ಕ ಕಾಲದಲ್ಲಿ, ಆಯಾ ಭಾಗದ ಹಿಂದುಳಿದ ಪ್ರದೇಶವನ್ನು ಗಮನದಲ್ಲಿಟ್ಟು ಅದಕ್ಕೆ ಏನೇನು ಮಾಡಬೇಕೆಂದು ರಾಜ್ಯ ಸರ್ಕಾರ ನಿರ್ಣಯ ಮಾಡಿದರೆ ಅದನ್ನು ಕಾರ್ಯಗತ ಮಾಡಲಿಕ್ಕೆ ಜಿಲ್ಲಾಪರಿಷತ್‌ನಲ್ಲಿ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ಅವರು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ಇನ್ನೂ ಅಂತಿಮ ನಿರ್ಣಯವಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಹೇಳತಕ್ಕದ್ದು ಏನೆಂದರೆ ನಾವು ಜಿಲ್ಲಾ ಬೋರ್ಡ್‌ಗಳನ್ನು ಮಾಡುತ್ತೇವೆ. ಮತ್ತು ಜಿಲ್ಲಾ ಪರಿಷತ್‌ಗಳನ್ನು ಮಾಡಿ ಆ ಪರಿಷತ್‌ಗಳಿಗೆ ಅಧಿಕಾರವನ್ನು ಕೊಡುತ್ತೇವೆಂದು. ಈ ಬೋರ್ಡ್‌ಗಳಿಗೆ ತಾವು ಹಣವನ್ನು ಒದಗಿಸಿಕೊಟ್ಟರೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಾಗುತ್ತದೆ ಎನ್ನುವ ಮಾತನ್ನು ಸಹ ಹೇಳಿದ್ದೀರಿ. ಅದೇ ರೀತಿಯಲ್ಲಿ ತಾಲ್ಲೂಕು ಬೋರ್ಡ್‌ಗಳಿಗೆ ತಾವು ಹೆಚ್ಚಿನ ಅಧಿಕಾರವನ್ನು ಕೊಟ್ಟು ಹೆಚ್ಚಿನ ಹಣವನ್ನು ಒದಗಿಸಿಕೊಟ್ಟರೆ ಆ ಪ್ರದೇಗಳ ಅಭಿವೃದ್ಧಿಯಾಗುತ್ತದೆ. ಅದೇ ರೀತಿಯಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯವನ್ನು ಸ್ಯಾಟ್ಸ್‌ಚುಟರಿ ಬೋರ್ಡ್ ಮಾಡಬೇಕೆನ್ನುವ ಒತ್ತಾಯ ಕೂಡ ಇದೆ. ಆದ್ದರಿಂದ ಹಿಂದಿನ ಸರ್ಕಾರದವರು ಹೈದ್ರಾಬಾದ್ ಕರ್ನಾಟಕವನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿತ್ತು. ಆ ಸಮಿತಿಯು ವರದಿಯನ್ನು ಸಹ ಸಲ್ಲಿಸಿತ್ತು. ಆ ವರದಿಯನ್ನು ತಾವು ಪರಿಶೀಲಿಸಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಬೋರ್ಡ್ ಮಾಡಬೇಕೆನ್ನುವ ವಾದ ಕೂಡ ಇದೆ. ಎರಡನೆಯದಾಗಿ ೭ ಕೋಟಿ ೮೦ ಲಕ್ಷ ರೂಪಾಯಿಗಳ ಅವಾರ್ಡ್‌ನಲ್ಲಿ ತಾವು ಇದುವರೆಗೂ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಇನ್ನು ಎಷ್ಟು ಹಣ ಉಳಿದಿದೆ. ಉಳಿದಿರತಕ್ಕಂತಹ ಹಣವನ್ನು ಇನ್ನು ೧೫ ದಿವಸಗಳೊಳಗಾಗಿ ಖರ್ಚು ಮಾಡುತ್ತೀರಾ? ಖರ್ಚು ಮಾಡುವುದಕ್ಕಾಗದಿದ್ದರೆ ಆ ಹಣವನ್ನು ಏನು ಮಾಡುತ್ತೀರಿ

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಸುಮಾರು ೬ ಕೋಟಿ ರೂಪಾಯಿಗಳನ್ನು ನಾವು ವಿವಿಧ ಇಲಾಖೆಗಳಿಂದ ಡೈವರ್ಟ್ ಮಾಡಿದ್ದೇವೆ. ಇನ್ನು ಉಳಿದಿರುವಂತಹ ಹಣ ಕೂಡ ನಾವು ಖರ್ಚು ಮಾಡುತ್ತೇವೆ. ಆದರೆ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ ಎನ್ನುವ ಬಗ್ಗೆ ನಿಕರವಾದ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ಅದನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ. ಇದರ ಬಗ್ಗೆ ನಾನು ಈಗಾಗಲೇ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಆದರೆ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುವುದಾದರೆ ಯಾವುದೇ ಹಣವನ್ನು ಸಮ್ಮ ಸರ್ಕಾರ ಲ್ಯಾಪ್ಸ್ ಮಾಡದಂತೆ ನೋಡಿಕೊಳ್ಳುತ್ತದೆ. ಅದರ ಬಗ್ಗೆ ಯಾವ ಸದಸ್ಯರಿಗೂ ಅನುಮಾನ ಬೇಡ. ಇನ್ನು ಉಳಿದಿರತಕ್ಕಂತಹ ಎರಡೂವರೆ ಕೋಟಿ ರೂಪಾಯಿಗಳ ಹಣವನ್ನು ಬಿಡಗಡೆ ಮಾಡುವುದಕ್ಕೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಮಾಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಇನ್ನು ೧೦-೧೫ ದಿವಸಗಳಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸದಸ್ಯರಿಗೆ ಒಂದು ಅಶ್ವಾಸನೆಯನ್ನು ಕೊಡಬಯಸುತ್ತೇನೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯನ್ನು ಮಾಡುವುದಕ್ಕಾಗಿ ಸರ್ಕಾರ ಯಾವ ರೀತಿಯಲ್ಲಿಯೂ ಹಿಂದೆ ಬೀಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳ ಉತ್ತರವನ್ನು ನಾನು ಬಹಳ ಕುತೂಹಲದಿಂದ ನಿರೀಕ್ಷೆ ಮಾಡುತ್ತಿದ್ದೆನು. ಆದರೆ ವಿಷಯ ಮಾತ್ರ ವಿಷಯಾಂತರವಾಗಿದೆ. ಮಾನ್ಯ ಸದಸ್ಯರ ಪ್ರಶ್ನೆ ಇಷ್ಟೇ. ಹಿಂದುಳಿದ ಪ್ರದೇಶಗಳ ಅಸಮಾನತೆಯನ್ನು ಹೋಗಲಾಡಿಸಲು, ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯವನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಈಗ ಅಧಿಕಾರದ ವಿಕೇಂದ್ರೀಕರಣದಿಂದ ಆ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವೇ, ಹಿಂದುಳಿದ ಪ್ರದೇಶಗಳ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವೇ ಈ ಪ್ರಶ್ನೆ ಉದ್ಭವವಾದಂಥ ಕಾಲದಲ್ಲಿ ಒಂದು ಮಂಡಲಿಯನ್ನು ರಚನೆ ಮಾಡಿದಾಗ ಹಳೆಯ ಮೈಸೂರು ಭಾಗಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟು ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಭಾಗಕ್ಕೆ ಪ್ರಾತಿನಿಧ್ಯ ಕೊಡದೆಇದ್ದರೆ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರ ಯಾವಗಾರಿಯನ್ನು ಇಟ್ಟುಕೊಂಡಿದೆ. ಎನ್ನುತಕ್ಕಂತಹ ಶಂಕೆ ಜನರಲ್ಲಿ ಬಂದಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೊ.

ಶ್ರೀ ಹೆಚ್ ಡಿ. ದೇವೇಗೌಡ.—ಮಾನ್ಯ ವಿರೋಧಪಕ್ಷದ ನಾಯಕರಿಗೆ ಬಹಳ ಸೂಕ್ಷ್ಮ ಬುದ್ಧಿ ಇದೆ. ಹಿಂದುಳಿದ ಪ್ರದೇಶಗಳ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಅಧಿಕಾರವಿದ್ದರೆ ಮಾತ್ರ ಸಾಧ್ಯ ವೆಂದು ಹೇಳುವುದಕ್ಕಾಗುವುದಿಲ್ಲ. ಕೇವಲ ಪ್ರಾತಿನಿಧ್ಯ ಕೊಟ್ಟರೆ ಮಾತ್ರ ಅಭಿವೃದ್ಧಿ ಮಾಡಿದಂತಾಗುವುದಿಲ್ಲ. ಹಿಂದೆ ನಿಮ್ಮ ಭಾಗದವರೇ ಮುಖ್ಯಮಂತ್ರಿಗಳಾಗಿದ್ದರು. ಆಗ ಅವರು ಏತಕ್ಕೆ ನಿಮ್ಮ ಪ್ರದೇಶವನ್ನು ಅಭಿವೃದ್ಧಿ ಮಾಡಲಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹಿಂದಿನ ಮುಖ್ಯಮಂತ್ರಿಗಳ ಕಾಲದಲ್ಲಿ ಅವರು ಎಷ್ಟು ಅಭಿವೃದ್ಧಿ ಕೆಲಸ ಮಾಡಬೇಕಾಗಿತ್ತೋ ಅಷ್ಟು ಕೆಲಸವನ್ನು ಅವರು ಮಾಡಿದ್ದಾರೆ.

ಶ್ರೀ ಹೆಚ್ ಡಿ. ದೇವೇಗೌಡ.—ಇದಕ್ಕೆ ಕಾರಣವಿಷ್ಟೇ, ನಾನು ಹಿಂದಿನ ಮುಖ್ಯಮಂತ್ರಿಗಳು ಏನೂ ಮಾಡಿಲ್ಲವೆಂದು ಹೇಳಲಿಲ್ಲ. ಅಲ್ಲಿ ಏನೂ ಕೆಲಸ ಆಗಿಲ್ಲವೆಂದು ನಾನು ಹೇಳಲಿಲ್ಲ. ಹಿಂದುಳಿದ ರಂಥ ಪ್ರದೇಶಗಳಿಗೆ ಪ್ರಾತಿನಿಧ್ಯ ಕೊಡಬೇಕೆಂದು ಎಲ್ಲಾ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಅದರ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ಹಿಂದುಳಿದ ಪ್ರದೇಶಗಳಿಗೆ ಅಸಮಾನತೆಯನ್ನು ತೋರಿಸಬೇಕು ಎನ್ನುವ ಭಾವನೆಯನ್ನು ಸರ್ಕಾರ ಇಟ್ಟುಕೊಂಡಿಲ್ಲ. ಸರ್ಕಾರ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೋಸ್ಕರವಾಗಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿ ಕೊಟ್ಟರೆ ಅಭಿವೃದ್ಧಿ ಸಾಧನೆ ಮಾಡಬಹುದು. ಇಲ್ಲವೇ ಅಧಿಕಾರಿಗಳ ಪತಿಯಿಂದ ಕೆಲಸ ಮಾಡಿಸಬಹುದು. ನಾವು ಮಾಡಲಿರುವ ಜಿಲ್ಲಾ ಪರಿಷತ್‌ಗಳ ಮುಖಾಂತರವಾಗಿ ಅಭಿವೃದ್ಧಿ ಕೆಲಸ ಮಾಡಬಹುದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಾಪುಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು ಶ್ರೀಮಾನ್ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯನ್ನು ಮಾಡಲು ಒಂದು ಮಂಡಲಿಯನ್ನು ರಚನೆ ಮಾಡಬೇಕೆಂದು ಹಿಂದಿನ ಸರ್ಕಾರ ನಿರ್ಧಾರ ಮಾಡಿ ಆ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ಕೂಡ ಸಲ್ಲಿಸಿದೆಯೆಂದು, ಆ ವರದಿಯ ಪ್ರಕಾರ ಆ ಭಾಗವನ್ನು ಅಭಿವೃದ್ಧಿ ಮಾಡಲು ಸುಮಾರು ೩೫೦ ಕೋಟಿ ರೂಪಾಯಿಗಳ ಹಣವನ್ನು ಒದಗಿಸಿಕೊಡಬೇಕೆಂದು ಕೂಡ ತಿಳಿಸಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದಾರೆ ಹಿಂದಿನ ಸರ್ಕಾರದ ನಿಲುವು ಸರಿಯಾದುದಲ್ಲ. ಹೈದರಾಬಾದ್ ಕರ್ನಾಟಕವನ್ನು ಅಭಿವೃದ್ಧಿ ಮಾಡುವುದಕ್ಕೆ ಒಂದು ಪ್ರತ್ಯೇಕ ಮಂಡಲಿ ಆಗತ್ಯವಿಲ್ಲ. ಮತ್ತು ಎರಡು ಮೂರು ಪಂಚಾಯ್ತಿಗಳನ್ನು ಸೇರಿಸಿ ಜಿಲ್ಲಾ ಬೋರ್ಡ್ ಮಾಡುವುದು ಅವಶ್ಯಕವೆಂದು ನನಗನ್ನಿಸುತ್ತದೆ. ಆದ್ದರಿಂದ ಜಿಲ್ಲಾ ಬೋರ್ಡ್ ಮಾಡಿ ಆ ಜಿಲ್ಲಾ ಬೋರ್ಡ್‌ಗೆ ಹಣವನ್ನು ಒದಗಿಸಿಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ?

ಶ್ರೀ ಧರ್ಮಸಿಂಗ್,—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದರಲ್ಲಿ ವಿಷಯಾಂತರ ಮಾಡುತ್ತಿದ್ದಾರೆ. ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಅಭಿವೃದ್ಧಿ ಮಾಡಲು ಪ್ರತ್ಯೇಕ ಬೋರ್ಡ್ ಇದುವರೆಗೂ ಅವಶ್ಯಕವಿರಲಿಲ್ಲವೇ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಉಪಾಧ್ಯಕ್ಷರೇ, ವಿಷಯಾಂತರವಾಗಿದೆ. ವಿಷಯಾಂತರ ಮಾಡುವುದರಲ್ಲಿ ಇವರು ಪರಿಣಿತರಾಗಿದ್ದಾರೆ.

ಶ್ರೀ ಬಾಪೂಗೌಡ.—ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ವತಿಯಿಂದ ಇನ್ನು ಖರ್ಚು ಮಾಡಬೇಕಾಗಿರುವ ೨೫೦ ಕೋಟಿ ರೂಪಾಯಿಗಳ ಕೊರತೆ ಏನಿರ ಇದೆ. ಈ ಕೊರತೆಯನ್ನು ಪೂರ್ಣ ಮಾಡತಕ್ಕಂಥ ಕಾಲದಲ್ಲಿ ಪ್ಲಾನ್ ಮತ್ತು ನಾನ್‌ಪ್ಲಾನ್ ಎರಡಕ್ಕೂ ಹಣ ಕೊಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಉಪಾಧ್ಯಕ್ಷರೇ ಈ ಜಿಲ್ಲಾ ಪರಿಷತ್ತುಗಳನ್ನು ಮಾಡುವ ಬಗ್ಗೆ ಸರ್ಕಾರ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದೆ. ಇವತ್ತು ಜನತೆಗೆ ಹೆಚ್ಚಿನ ಅಧಿಕಾರ ಕೊಡಬೇಕೆಂಬುದೂ ನಮ್ಮ ಉದ್ದೇಶ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಎಲ್ಲಾ ತಿದ್ದುಪಡಿಗಳನ್ನು ಮಾಡಿ ಈ ಸದನದ ಮುಂದೆ ತರುತ್ತೇವೆ. ಇದರಲ್ಲಿ ಯಾವುದನ್ನೂ ಮುಚ್ಚುಮರೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ತಾವು ವಿಷಯವನ್ನು ಬದಲಾಯಿಸಬೇಡಿ.

ಶ್ರೀ ಹೆಚ್.ಡಿ. ದೇವೇಗೌಡ.—ನಾನು ನಿಮ್ಮ ಪ್ರಶ್ನೆಗೇ ಉತ್ತರ ಹೇಳುತ್ತಿದ್ದೇನೆ. ೩೫೦ ಕೋಟಿ ರೂಪಾಯಿ ಖರ್ಚುಮಾಡಬೇಕೆಂದೂ ಹಿಂದಿನ ಸರ್ಕಾರ ತೆಗೆದುಕೊಂಡ ನಿರ್ಣಯಕ್ಕೆ ತಾವು ಕಟಿಬದ್ಧರಾಗಿದ್ದೀರಾ ಎಂದು ನೀವು ಪ್ರಶ್ನೆ ಕೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ನನಗೆ ಮಾನ್ಯ ಮಂತ್ರಿಗಳಿಂದ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಧರ್ಮಸಿಂಗ್.—ಇದು ಮಹತ್ತರವಾದ ಪ್ರಶ್ನೆಯಾಗಿದೆ.

ಉಪಾಧ್ಯಕ್ಷರು.—ಈ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಶ್ನೆಗೆ ಉತ್ತರ ವಿಸ್ತಾರ ಆಗಬಾರದು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಮಾನ್ಯ ಸಚಿವರು ಉತ್ತರ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ವಿಷಯವನ್ನು ಗಂಡಾಂತರ ಪರಿಸ್ಥಿತಿಗೆ ತಂದುಬಿಟ್ಟಿದ್ದಾರೆ. ನಾವು ಇದನ್ನು ಅಷ್ಟಕ್ಕೇ ನಿಲ್ಲಿಸಿಬಿಟ್ಟರೆ ಬಹಳ ಅನಾಹುತವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ, ಪ್ರಶ್ನೋತ್ತರ ಸಮಯದಲ್ಲಿ ಒಂದೇ ಪ್ರಶ್ನೆಗೆ ೪೫ ನಿಮಿಷಗಳ ಕಾಲ ಮುಂದುವರೆಸಿರತಕ್ಕಂಥಾದ್ದು ಸರಿಯಲ್ಲ.

(ಗೊಂದಲ)

ಇದು ಮಹತ್ತರ ಪ್ರಶ್ನೆ ಎಂಬ ವಿಚಾರದಲ್ಲಿ ನಾನು ಕೂಡ ಒಪ್ಪುತ್ತೇನೆ. ಇದರ ಬಗ್ಗೆ ಏನನ್ನೂ ಮುಚ್ಚಿಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿಲ್ಲ. ಆದರೆ ಮಾನ್ಯ ಸ್ನೇಹಿತರಿಗೆ ನಾನು ಮನವರಿಕೆ ಮಾಡಿಕೊಡಬಯಸುತ್ತೇನೆ. ಒಂದು ಪ್ರಶ್ನೆಗೆ ಇಷ್ಟೊಂದು ಕಾಲಾವಕಾಶ ತೆಗೆದುಕೊಳ್ಳುವುದು ಸರಿಯಲ್ಲ, ಇದು ಬೇರೆ ರೂಪದಲ್ಲಿ ಬರುವುದಕ್ಕೂ ಅವಕಾಶ ಇದೆ. ನಿಯಮಾವಳಿಗಳಿಗೆ ಅನುಸಾರವಾಗಿ ಬೇರೊಂದು ರೂಪದಲ್ಲಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಸಾಧ್ಯತೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ನನ್ನ ಪ್ರಶ್ನೆಯನ್ನು ತಾವು ಗಮನ ಕೊಟ್ಟು ಕೇಳಬೇಕು. ಹೈದರಾಬಾದ್ ಕರ್ನಾಟಕ ಕ್ಷೇತ್ರಕ್ಕೆ ಹಣ ಕೊಡುವಂಥಾದ್ದರ ಬಗ್ಗೆ Please don't mix up. It is apart from the district plan. It is from the overall savings of the overall plan of the State. ಆದ್ದರಿಂದ ಜಿಲ್ಲಾ ಯೋಜನೆಗೆ ಹೆಚ್ಚಿನ ಹಣ ಕೊಡುವುದರಿಂದಲೇ ತಾವು ಜಿಲ್ಲಾಪರಿಷತ್ತು ಮಾಡುತ್ತೇವೆ ಎಂದು ಹೇಳಿದರೆ ಇದರ ಅರ್ಥ ಏನಾಗುತ್ತದೆ ಎಂದರೆ ಹೈದರಾಬಾದ್ ಕರ್ನಾಟಕಕ್ಕೆ ಇರತಕ್ಕಂಥ ಈ ಯೋಜನೆಯನ್ನು ತಾವು ರದ್ದು ಮಾಡುತ್ತೀರೆಂದು ತಿಳಿಯಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ಪಾಚ್ಯೂಟರಿ ಬೋರ್ಡನ್ನು ಮಾಡಬೇಕೇ ಬಿಡಬೇಕೇ ಎನ್ನುವುದು ಒಂದು ಪ್ರಶ್ನೆ. ಸ್ಪಾಚ್ಯೂಟರಿ ಬೋರ್ಡನ್ನು ಮಾಡಬೇಕೆಂದು ತಾವು ಕೊಟ್ಟಂತಹ ಶಿಫಾರಸ್ಸನ್ನು ಓದುತ್ತೇನೆ.

The Statutory Board suggested by the Committee is not the implementing agency by itself, by replacing or duplicating the work of other Govt. departments or organisations
ಇದಕ್ಕೆ ಯಾವುದೇ ಯೋಜನೆಯನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಅಧಿಕಾರ ಇಲ್ಲ.

"On the countary it was suggeteed to be an effective agency to formulate schemes, to supervise the implementation of planned schemes and generally be a watch-dog against the lapsing of funds by various departments of the Govt.
ಇದೇ ಅಧಿಕಾರ ಇವತ್ತು ಜಿಲ್ಲಾಪರಿಷತ್ತುಗಳಿಗೆ ಹೋಗುವುದಾದರೆ, ಇದು ಡುಪ್ಲಿಕೇಶನ್ ಆಗುವುದು. ಬೇಡ. ಇದನ್ನು ಕೈಬಿಡುತ್ತೇವೆಂದು ನಾನು ಹೇಳಲಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತುಗಳನ್ನು ಕಾರ್ಯಗತ ಮಾಡಬೇಕೆಂಬ ಪ್ರಶ್ನೆ ಬಂದಾಗ ಮತ್ತು ಅಭಿವೃದ್ಧಿ ವೆಚ್ಚವನ್ನು ಖರ್ಚುಮಾಡಿ ಸಂಬಂಧಪಟ್ಟ ಅಧಿಕಾರ ಅವರ ಪಾಲಿಗೆ ಹೋಗುವಾಗ ಮತೊಂದು ಎಜೆನ್ಸಿ ಅಲ್ಲಿ ಬೇಕೇ ಎಂಬುದು ಪ್ರಶ್ನೆ. ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಈ ಒಂದು ಭಾಗದ ತಾರತಮ್ಯವನ್ನು ಮತ್ತು ಅಸಮಾನತೆಯನ್ನು ಸರಿಪಡಿಸಿಕೊಳ್ಳುವ ಬಗ್ಗೆ ಹೇಳಿದ್ದೇನೆ.

(ಗೊಂದಲ)

ಶ್ರೀ ಧರ್ಮಸಿಂಗ್.—ಇದರೆಲ್ಲೀನೋ ರಾಜಕೀಯವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—೩೬೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ತಾವು ಹೇಳಿಬಿಡಿ. ಇದನ್ನು ಸ್ಪಾಚ್ಯೂಟರಿ ಬೋರ್ಡ್‌ಮಾಡಿ ಅದರ ಮೂಲಕ ಹಂತಹಂತವಾಗಿ ಕೊಡುತ್ತೇವೆಂದು ಹೇಳಿಬಿಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮಂತ್ರಿಗಳು ಶಾಸನ ಬದ್ಧವಾದಂತಹ ಮಂಡಳಿ ರಚನೆ ಯಾಗಿಲ್ಲವೆಂದು ಹೇಳಿದರು. ಶಾಸನಬದ್ಧವಾದ ಮಂಡಳಿ ರಚನೆಯಾಗದೇ ಇರುವಾಗ ಬೇರೆ ಬೇರೆ ಇಲಾಖೆಗಳಿಂದ ಒದಗಿಸಿರತಕ್ಕ ಹಣವನ್ನು ಬೇರೆ ಕಡೆಗೆ ಡೈವರ್ಟ್ ಮಾಡಲಿಕ್ಕೆ ಶಾಸನಸಭೆಯ ಒಪ್ಪಿಗೆ ಅವಶ್ಯವಾಗಿ ಬೇಕು. ಇದನ್ನೆಲ್ಲಾ ನೋಡಿದರೆ ಈ ನಿಟ್ಟಿನಲ್ಲಿ ಯಾವ ಭರವಸೆಯನ್ನೂ ಸರ್ಕಾರ ಕೊಡಕೂಡದು.

ಶ್ರೀ ಧರ್ಮಸಿಂಗ್.—ಹಿಂದಿನ ಸರ್ಕಾರ ಹೈದರಾಬಾದ್ ಕರ್ನಾಟಕ ಪ್ರದೇಶ ಬಹಳ ಹಿಂದುಳಿ ದಿರುವುದರಿಂದ ಒಟ್ಟು ಹಣಕಾಸಿನ ಯೋಜನೆಯಲ್ಲಿ ೩೫೦ ಕೋಟಿ ರೂಪಾಯಿಗಳನ್ನು ಆ ಭಾಗದ ಅಭಿವೃದ್ಧಿಗಾಗಿ ಹಂತ ಹಂತವಾಗಿ ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದ್ದು.

(ಗೊಂದಲ)

ಉಪಾಧ್ಯಕ್ಷರು.—ಈ ಪ್ರಶ್ನೆ ಬಗ್ಗೆ ಈಗಾಗಲೇ ಒಂದು ಗಂಟೆಯಿಂದ ಚರ್ಚೆಯಾಗಿದೆ. ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಧರ್ಮಸಿಂಗ್.—ಇದರ ಬಗ್ಗೆ ಎರಡೂವರೆ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ಆ ಬಗ್ಗೆ ಲಿಖಿತ ಮೂಲಕ ಬರೆದು ಕಳುಹಿಸಿ ಪರಿಶೀಲನೆ ಮಾಡೋಣ.

ಶ್ರೀ ಧರ್ಮಸಿಂಗ್.—ಆ ಪ್ರದೇಶದ ಉನ್ನತಿಯ ಬಗ್ಗೆ ಹಿಂದಿನ ಸರ್ಕಾರ ತೆಗೆದುಕೊಂಡಿದ್ದಂತಹ ತೀರ್ಮಾನದ ಬಗ್ಗೆ ತಾರತಮ್ಯ ತೋರಿಸುವುದಾದರೆ, ಇದರ ಬಗ್ಗೆ ಆ ಭಾಗದ ಜನರ ಮುಂದೆ ಹೋಗಿ ಹೇಳಬೇಕಾಗುತ್ತದೆ. ಮತ್ತೆ ನಾವು ಇದರ ಬಗ್ಗೆ ಒಂದು ದೊಡ್ಡ ಚಳುವಳಿಯನ್ನೇ ಮಾಡಬೇಕಾಗುತ್ತದೆ

ಶ್ರೀ ಪಿ. ರಾಮ್‌ದೇವ್.—ಇದು ಪ್ರಶ್ನೋತ್ತರ ಕಾಲ, ಒಂದು ಪ್ರಶ್ನೆಗೆ ಇಷ್ಟೊಂದು ಸಮಯ ತೆಗೆದುಕೊಂಡರೆ ಹೇಗೆ?

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ತಾರತಮ್ಯದ ಪ್ರಶ್ನೆಯಿಲ್ಲ.

ಒಬ್ಬ ಮಾನ್ಯ ಸದಸ್ಯರು,—ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳಬೇಕೆಂದು ಉಪಾಧ್ಯಕ್ಷರು ಈಗಾಗಲೇ ಅಪ್ಪಣೆ ಕೊಟ್ಟು ಆಗಿದೆ. ಆದ್ದರಿಂದ ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ,—ಮಾನ್ಯ ಅಧ್ಯಕ್ಷರೇ ತಮ್ಮ ಮುಖೇನ ನಾನು ಇವತ್ತು ಸನ್ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುವುದೇನೆಂದರೆ, ಇವತ್ತು ಈ ರಾಜ್ಯದಲ್ಲಿ ಯಾವುಬೇ ಬಿಂದುಳಿದ ಭಾಗದಲ್ಲಿ ಚಳುವಳಿ ಮಾಡುವಂತಹ ವಿಚಾರಕ್ಕೆ ಎಡೆಕೊಡುವ ಪ್ರಶ್ನೆ ನಮ್ಮಮುಂದೆ ಇಲ್ಲ. ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಚಿವರು ಉತ್ತರ ಕೊಡುವಾಗ ಈ ರೀತಿಯು ಹಾರಿಕೆಯ ಉತ್ತರ ಕೊಟ್ಟರೆ ಹೇಗೆ? ಇದರ ಬಗ್ಗೆ ಪುನಃ ಆಲೋಚನೆ ಮಾಡಿ, ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ನಿಮ್ಮ ಪಕ್ಷದ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಿ. ಪ್ರಾದೇಶಿಕ ಅಸಮಾನತೆಯ ಬಗ್ಗೆ ನೀವು ಯಾವುದೇ ರೀತಿಯ ಚರ್ಚೆ ಮಾಡದೆ ಈ ಒಂದು ನೀತಿಯನ್ನು ರೂಪಿಸಿದರೆ ಹೇಗೆ?

(ಉತ್ತರ ಇಲ್ಲ)

ಉಪಾಧ್ಯಕ್ಷರು.—೨೫ ಮತ್ತು ೨೬ನೇ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಆರೋಗ್ಯ ಸಚಿವರು ಇಲ್ಲದೇ ಇರುವುದರಿಂದ ಈ ಪ್ರಶ್ನೆಗಳನ್ನು ಮುಂದೂಡಲಾಗಿದೆ.

ವಿಷಯ,- ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಸದಸ್ಯರನ್ನು ನೇಮಕ ಮಾಡುವ ವಿಚಾರ

೨೭ ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ)—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಗೆಕಂಡ ಪ್ರಶ್ನೆಗಳನ್ನು ಉತ್ತರಿಸುವರೇ?

ಅ) ಲೋಕ ಸೇವಾ ಆಯೋಗದಲ್ಲಿ ಎಷ್ಟು ಜನ ಸದಸ್ಯರನ್ನು ತುಂಬಬೇಕಾಗಿದೆ.

ಆ) ಆ ಸ್ಥಳಗಳನ್ನು ಯಾವಾಗ ತುಂಬಲಾಗುವುದು.

ಇ) ನೇಮಿಸುವಾಗ ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯ ನೀಡಲಾಗುವುದೇ?

ಶ್ರೀ ರಾಮಕೃಷ್ಣ ಪೆಡ್ಡಿ (ಮುಖ್ಯ ಮಂತ್ರಿಗಳು)—.

ಅ) ಇಬ್ಬರು ಸದಸ್ಯರನ್ನು ನೇಮಕ ಮಾಡಬೇಕಾಗಿದೆ.

ಆ) ಆ ಸ್ಥಳಗಳನ್ನು ತುಂಬಲು ಸರ್ಕಾರವು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು.

ಇ) ಅರ್ಹರಾದ ವ್ಯಕ್ತಿಗಳನ್ನು ಜಿಲ್ಲೆ ಅಥವಾ ಪ್ರಾದೇಶಿಕ ಭೇದವಿಲ್ಲದೆ ನೇಮಕ ಮಾಡಲಾಗುವುದು.

ಶ್ರೀ ಎಚ್. ಡಿ. ದೇವೇಗೌಡ.—ಉತ್ತರವನ್ನು ಸನ್ಮಾನ್ಯ ಸದಸ್ಯರಿಗೆ ಕೊಡಲಾಗಿದೆ ಎಂದು ನಾನು ಭಾವಿಸಿ, ಲೋಕ ಸೇವಾ ಆಯೋಗದಲ್ಲಿ ಖಾಲಿ ಇರುವ ಇಬ್ಬರು ಸದಸ್ಯರನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆದಷ್ಟು ಶೀಘ್ರವಾಗಿ ಆ ಎರಡು ಸದಸ್ಯರನ್ನು ಖಾಲಿ ಇರತಕ್ಕಂತಹ ಜಾಗಕ್ಕೆ ಭರ್ತಿಮಾಡಲಾಗುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇರತಕ್ಕಂತಹ ಒಟ್ಟು ಸದಸ್ಯರ ಸಂಖ್ಯೆ ಎಷ್ಟು? ಮತ್ತೆ ಖಾಲಿ ಇರತಕ್ಕಂತಹ ಎರಡು ಜಾಗಗಳಿಗೆ ಇಬ್ಬರು ಸದಸ್ಯರನ್ನು ಯಾವಾಗ ಭರ್ತಿ ಮಾಡಲಾಗುವುದು? ನಿರ್ದಿಷ್ಟ ದಿನವನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ?

ಶ್ರೀ ಎಚ್. ಡಿ. ದೇವೇಗೌಡ.—ಲೋಕಸೇವಾ ಆಯೋಗದಲ್ಲಿರತಕ್ಕಂತಹ ಒಟ್ಟು ಸದಸ್ಯರ ಸಂಖ್ಯೆ ೭. ಇವರಲ್ಲಿ ಇಬ್ಬರು ಜನರಿದ್ದಾರೆ. ೨ ಸದಸ್ಯರ ಸ್ಥಾನ ಖಾಲಿ ಇವೆ. ಒಂದು ೧೧–೮–೮೧ ರಿಂದ ಖಾಲಿ ಇದೆ. ಮತ್ತೊಂದು ೧೪–೨–೧೯೮೨ ರಿಂದ ಖಾಲಿ ಬಿದ್ದಿದೆ.